# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಶಿವಾಜಿನಗರ ಉಪವಿಭಾಗ ಹಲಸೂರು ಕೆರೆರಸ್ತೆ, ಬೆಂಗಳೂರು-42

---

ಸಂಖ್ಯೆ:ಸ.ಇಂ/ವಾ-92/ವಾರ್ಡ್‌ಸಭೆ/04/2020-21 ದಿನಾಂಕ:21-11-2020

## ವಾರ್ಡ್-92 ರ ವಾರ್ಡ್ ಸಭೆಯ ನಡವಳಿ

ದಿನಾಂಕ: 21/11/2020 ರಂದು ಶಿವಾಜಿನಗರ ಉಪ ವಿಭಾಗ ವಾರ್ಡ್-92-ಶಿವಾಜಿನಗರ ವಾರ್ಡ್ ಕಛೇರಿಯಲ್ಲಿ ಶ್ರೀ. ಸೈಫುದ್ದಿನ್, ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್-92 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

**ಹಾಜರಿದ್ದವರು:**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ಸೈಫುದ್ದಿನ್, | ನೋಡಲ್ ಅಧಿಕಾರಿ ಮತ್ತು ಸಕಾನಿಅ ಶಿವಾಜಿನಗರ ಉಪ ವಿಭಾಗ |
| 2 | ಶ್ರೀ.ಶಿವೇಗೌಡ, | ಆರೋಗ್ಯ ವೈದ್ಯಾಧಿಕಾರಿ, ಶಿವಾಜಿನಗರ ವಲಯ |
| 3 | ಶ್ರೀ.ಶಿವಕುಮಾರ್, | ಸ.ಕ.ಅ(ಶಿವಾಜಿನಗರ) |
| 4 | ಶ್ರೀ ಪ್ರವೀಣ್.ಎನ್.ಎಂ, | ಸಅ ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ಸಂಖ್ಯೆ:92(ಪ್ರಭಾರ) |
| 5 | ಶ್ರೀ ತ್ಯಾಗರಾಜ್, | ಕಂದಾಯ ಪರಿವೀಕ್ಷಕರು |
| 6 | ಶ್ರೀ ನಿರಂಜನ್, | ಸಕಾನಿಅ(ಘ.ತ್ಯಾ.ನಿ) ಶಿವಾಜಿನಗರ ವಿಭಾಗ(ಪ್ರಭಾರೆ) |
| 7 | ಶ್ರೀ.ರಾಜೇಶ್, | ಸ.ಅ(ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 8 | ಶ್ರೀ.ಖಾಸೀಮ್, | ಸ.ಅ(ಬೆಸ್ಕಾಂ) |
| 9 | ಶ್ರೀ.ಲಾವಣ್ಯ ಬಾಯ್, | ಕಂದಾಯ ವಸೂಲಿಗಾರರು |
| 10 | ಶ್ರೀ.ವೆಂಕಟೇಶ್, | ಕಿರಿಯ ಆರೋಗ್ಯ ಪರಿವೀಕ್ಷಕರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳ / ಹಾಜರಿದ್ದ ವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಬಿಸಲಾಯಿತು.

1) **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-** ಶಿವಾಜಿನಗರ ಉಪ ವಿಭಾಗದ ವಾರ್ಡ್ ಸಂಖ್ಯೆ:92ರ ವ್ಯಾಪ್ತಿಯಲ್ಲಿ ಸಾರ್ವಜನಿಕರ ಆರೋಗ್ಯ ಕೇಂದ್ರದ ವೈಧ್ಯಾಧಿಕಾರಿಗಳು ಕೋವಿಡ್ ಪರೀಕ್ಷೆಯ ವಿವರಗಳನ್ನು ಸಭೆಗೆ ಈ ಕೆಳಕಂಡಂತೆ ವಿವರಗಳನ್ನು ನೀಡಿದರು.

- ವಾರ್ಡಿನಲ್ಲಿ ಇರುವ ಕೋವಿಡ್ ರೋಗಿಗಳ ಮಾಹಿತಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ಪರವಾಗಿ ಹಾಜರಿದ್ದ ಸ್ಟಾಫ್ ನರ್ಸ್‌ರವರಿಂದ ಹಾಗೂ ಸಂಬಂಧಪಟ್ಟ ಆರೋಗ್ಯ ವೈಧ್ಯಾಧಿಕಾರಿಗಳಂದ ಪಡೆಯಲಾಗಿದ್ದು, ಇದರ ಬಗ್ಗೆ ಮತ್ತಷ್ಟು ಜಾಗ್ರತೆವಹಿಸಲು ತಿಳಿಸಿರುತ್ತಾರೆ. ಅದರಂತೆ ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಗಳು ಇದರ ಬಗ್ಗೆ ಅವಶ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿರುತ್ತಾರೆ.
- ಅಧ್ಯಕ್ಷರು ಮಾತನಾಡಿ, ತಾತ್ಕಾಲಿಕ ಪರೀಕ್ಷಾ ಕೇಂದ್ರಗಳನ್ನು ಕ್ರಿಮಿಟೋರಿಯಂ ಸ್ಥಳದ ಜೊತೆಗೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಸ್ಥಳಗಳಾದ ಪೊಲೀಸ್ ಠಾಣೆ ಹತ್ತಿರ, ತರಕಾರಿ ಅಂಗಡಿಗಳ ಸಮೀಪ, ಪೇಟೆ ಬೀದಿಗಳಂತಹ ಸ್ಥಳಗಳಲ್ಲಿ ಕ್ಯಾಂಪ್‌ಗಳನ್ನು ಹಮ್ಮಿಕೊಂಡು ಹೆಚ್ಚಿನ ಪರೀಕ್ಷೆ ನಡೆಸುವಂತೆ ಸೂಚಿಸಿದರು.
- ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಜನ ಜಾಗೃತಿ ಮೂಡಿಸಲು ಧ್ವನಿವರ್ಧಕವಿರು ಆಟೋಗಳಲ್ಲಿ ಸಾಯಂಕಾಲ 5 ರಿಂದ 7 ಗಂಟೆಯವರೆಗೆ ಜನನಿಬಿಡ ಪ್ರದೇಶಗಳಲ್ಲಿ ಪ್ರಚಾರ ಮಾಡಲು ವ್ಯವಸ್ಥೆ ಮಾಡುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಘನತ್ಯಾಜ್ಯದ ಗುತ್ತಿಗೆದಾರರಿಗೆ ಸೂಚಿಸಿದರು. ಜೊತೆಗೆ ಬೀದಿ ಬದಿಗಳಲ್ಲಿ ತಳ್ಳುವಗಾಡಿ & ಇತರ ವಾಣಿಜ್ಯ ಚಟುವಟಿಕೆದಾರರಿಗೆ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡುವಂತೆ ಜಾಗೃತಿ ಮೂಡಿಸಲು ಸೂಚಿಸಿದರು.

Scanned with CamScanner

- ಮಾಸ್ಕ್ ದರಿಸದೇ ಸಾರ್ವಜನಿಕವಾಗಿ ಓಡಾಡುವವರಿಗೆ ಕಡ್ಡಾಯವಾಗಿ ನಿಯಮಾವಳಿಗಳನ್ವಯ ದಂಡ ವಿಧಿಸುವುದು & ಮಾಸ್ಕ್ ಧರಿಸುವಂತೆ ಹಾಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳುವಂತೆ ಮನವೊಲಿಸುವ ಕೆಲಸವನ್ನು ನಿರ್ವಹಿಸುವಂತೆ ಸೂಚಿಸಿದರು.
- ಪ್ರತಿನಿಧಿಗಳು ಮಾತನಾಡುತ್ತಾ, ವಾರ್ಡಿನಲ್ಲಿ ಹಲವು ರಸ್ತೆಗಳಲ್ಲಿ ಘಣತ್ಯಾಜ್ಯ ಬ್ಲಾಕ್ ಸ್ಪಾಟನ್ನು ತೆರವುಗೊಳಿಸಿ, ಸದರಿ ರಸ್ತೆಯನ್ನು ಸ್ವಚ್ಛತೆಯಿಂದ ಕಾಪಾಡಲು ಸಭೆಯಲ್ಲಿ ಕೋರಿರುತ್ತಾರೆ, ಸ್ಥಳದಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಶಿವಾಜಿನಗರ ವಿಭಾಗ ರವರು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲಾಗುವುದು ತಿಳಿಸಿದರು.
- ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳಿಗೆ ಕೋವಿಡ್-19 ಕರೋನಾ ವೈರಸ್ ಸಾಂಕ್ರಾಮಿಕ ರೋಗವು ಹರಡದೇ ಇರುವಂತೆ ಮುಂಜಾಗ್ರತ ಕ್ರಮವಾಗಿ ಮಾಸ್ಕ್, ಗ್ಲೌಸ್, ಸಾನಿಟೈಸರ್ ಹಾಗೂ ಇತ್ಯಾದಿ ಅವಶ್ಯ ಸಲಕರಣೆಗಳನ್ನು ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಲು ಸ್ಥಳದಲ್ಲಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಶಿವಾಜಿನಗರ ವಿಭಾಗ ರವರಿಗೆ ಸೂಚಿಸಿದರು.

2) <u>**ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಸಂಬಂಧಿಸಿದಂತೆ**</u>:- ಸ್ಯಾನಿಟರಿ ಚೇಂಬರ್‌ಗಳಿಂದ ಮೇಲೆತ್ತುವ ಹೂಳನ್ನು ಸೂಕ್ತ ರೀತಿಯಲ್ಲಿ ಸಕಾಲದಲ್ಲಿ ವಿಲೇವಾರಿ ಮಾಡುವಂತೆ ಹಾಗೂ ರಸ್ತೆಗಿಂತ ಎತ್ತರ ಅಥವಾ ತಗ್ಗಿನಲ್ಲಿರುವ ಸ್ಯಾನಿಟರಿ ಚೇಂಬರ್‌ಗಳಿದ್ದರೆ ಶೀಘ್ರವಾಗಿ ರಸ್ತೆ ಮಟ್ಟಕ್ಕೆ ಸರಿಪಡಿಸುವಂತೆ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಹಾಯಕ ಇಂಜಿನಿಯರ್ ರವರಿಗೆ ಸೂಚಿಸಿದರು.

3) <u>**ಇಂಜಿನಿಯರಿಂಗ್ ಇಲಾಖೆ**</u>:- ವಾರ್ಡ್‌ನಲ್ಲಿ ಉಪವಿಭಾಗ ವ್ಯಾಪ್ತಿಯ ತಾತ್ಕಾಲಿಕ ವಿಪತ್ತು ನಿರ್ವಹಣಾ ತಂಡ ಕಾರ್ಯನಿರ್ವಹಿಸುತ್ತಿದೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯವು ಚಾಲನೆಯಲ್ಲಿರುತ್ತದೆ ಹಾಗೂ ಸಹಾಯ 2.0 ಆ್ಯಪ್‌ನಲ್ಲಿನ ದೂರುಗಳನ್ನು ಕಾಲಮಿತಿಯೊಳಗೆ ಸಮರ್ಪಕವಾಗಿ ಪರಿಹರಿಸಲಾಗುತ್ತಿದೆ ಎಂದು ಸಹಾಯಕ ಇಂಜಿನಿಯರ್‌ರವರು ಸಭೆಗೆ ತಿಳಿಸಿದರು.

4) <u>**ವಿದ್ಯುತ್ ಇಲಾಖೆ**</u>:- ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ರಸ್ತೆಗಳ ವಿದ್ಯುತ್ ಕಂಬಗಳನ್ನು ಪರಿಶೀಲಿಸಿ, ದುಸ್ಥಿತಿಯಲ್ಲಿರುವ ಕಂಬಗಳನ್ನು ಬದಲಾಯಿಸಲು ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಇಲಾಖೆಯವರಿಗೆ ಸೂಚಿಸಿದರು.

ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಹಾಕಿರುವ (OFC) ಕೇಬಲ್‌ಗಳನ್ನು ಕೂಡಲೇ ತೆರವುಗೊಳಿಸಿ, ಸಂಬಂಧಪಟ್ಟ ಸಂಸ್ಥೆಯವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲು ತಿಳಿಸಿದರು.

ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ / ದೂರುಗಳನ್ನು ದಾಖಲಿಸಲು ವಾರ್ಡ್‌ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆಧ್ಯತೆಯ ಮೇಲೆ ಕ್ರಮವಹಿಸುವಂತೆ ಹಾಗೂ ಪ್ರತಿವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುವಂತೆ ಸೂಚಿಸುತ್ತಾ, ರೋಡ್ ಇನ್ಫ್ರಾಸ್ಟ್ರಕ್ಚರ್ ಉಪವಿಭಾಗದವರಿಗೆ (Major) ರಸ್ತೆಗುಂಡಿಗಳನ್ನು ಶೀಘ್ರವಾಗಿ ದುರಸ್ಥಿಪಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಸೂಚಿಸಲು ಹಾಗೂ ಸ್ಮಾರ್ಟ್ ಸಿಟಿ ಸಂಸ್ಥೆ ವತಿಯಿಂದ ನಿರ್ವಹಿಸಲಾಗುತ್ತಿರುವ ಕೆಲಸ ಕಾರ್ಯಗಳನ್ನು ಅತೀ ವೇಗವಾಗಿ ನಿರ್ವಹಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಲು ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಪ್ರವೀಣ್.ಎಸ್.ಎಂ)
**ಸ.ಅ & ಕಾರ್ಯದರ್ಶಿ**
**ವಾರ್ಡ್-92, ಶಿವಾಜಿನಗರ(ಪ್ರಭಾರಿ)**

(ಸೈಫುದ್ದೀನ್)
**ಸ.ಕಾ.ಪಾ.ಅ & ನೋಡಲ್ ಅಧಿಕಾರಿ**
**ವಾರ್ಡ್-92, ಶಿವಾಜಿನಗರ**

Scanned with CamScanner